ಇದರ ಜೊತೆಗೆ ಬೆಂಗಳೂರು ನಗರದಲ್ಲಿ ದ್ವಿ-ಇಂಧನ ಎಲ್.ಪಿ.ಜಿ ಹೊಂದಿರುವ ಆಟೋರಿಕ್ಷಾಗಳಿಗೆ ಮಾತ್ರ ಹೊಸ ರಹದಾರಿಯನ್ನು ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ಐದು ಕೇಂದ್ರಗಳಲ್ಲಿ ಪರಿವೇಷ್ಯಕ ವಾಯುವಿನ ಗುಣಮಟ್ಟವನ್ನು ಮಾಪನ ಮಾಡುತ್ತಿದೆ.

ಎರಡು ಆನ್‌ಲೈನ್ ಪರಿವೇಷ್ಯಕ ವಾಯುವಿನ ಗುಣಮಟ್ಟದ ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸರಬರಾಜು ಆದೇಶವನ್ನು ನೀಡಲಾಗಿದೆ.

ವಾಹನಗಳಿಂದ ಹೊರಬರುವ ವಾಯುವಿನ ಮಾಪನವನ್ನು ನಡೆಸುವ ಬೇಕಾದ ಉಪಕರಣಗಳನ್ನು ಅಳವಡಿಸಿದ ಸುಸಜ್ಜಿತವಾದ 8 ಪರಿಸರ ವಾಹಿನಿ ವಾಹನಗಳನ್ನು ಸಾರಿಗೆ ಇಲಾಖೆಗೆ ನೀಡಲಾಗಿದೆ.

ಬೆಂಗಳೂರು ನಗರ ಹೊರವರ್ತುಲ ರಸ್ತೆಯ ಒಳಗಿನ ವ್ಯಾಪ್ತಿಯಲ್ಲಿರುವ ಪೆಟ್ರೋಲ್ ಬಂಕುಗಳಲ್ಲಿ ಕೇವಲ ಪ್ರೀಮಿಕ್ಸೆಡ್ 2-T ಎಣ್ಣೆಯನ್ನು ನಾಜಲ್ ಮುಖಾಂತರ ಮಾರಾಟ ಮಾಡುವಂತೆ ಸರ್ಕಾರ ಆದೇಶ ಹೊರಡಿಸಿದೆ.

ಪರಿಣಾಮಕಾರಿಯಾಗಿ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಒಂದು ಕಾರ್ಯಪಡೆಯನ್ನು ಸರ್ಕಾರವು ರಚಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸರ್ಕಾರವು ಬೆಂಗಳೂರು ನಗರದ ವಾಯು ಮಾಲಿನ್ಯವನ್ನು ನಿಯಂತ್ರಿಸಲು 14 ಅಂಶಗಳ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿ ಜಾರಿಗೊಳಿಸಲಾಗುತ್ತಿದೆ. ಈ ಕ್ರಿಯಾ ಯೋಜನೆಯ ಪ್ರಗತಿಯನ್ನು ಆಗಿಂದಾಗ್ಗೆ ಪರಿಶೀಲಿಸಲಾಗುತ್ತಿದೆ.

154(372) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ): ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಸಭೆ ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಹಳೇ ಮದರಾಸ್ ರಸ್ತೆ ಹಾಗೂ ಇತರ ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿ ಜನರು/ಸಂಸ್ಥೆಗಳು ಕೆಡವಿದ ಕಟ್ಟಡಗಳ ಸಾಮಗ್ರಿಗಳನ್ನು ಪೇರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ?

ಆ) ಹಾಗಿದ್ದಲ್ಲಿ, ವಾಯು ಮತ್ತು ಸ್ಥಳವನ್ನು ಮಾಲಿನ್ಯ ಮಾಡುತ್ತಿರುವ ಈ ಜನರ/ ಏಜೆನ್ಸಿಯ ವಿರುದ್ಧ ಸರ್ಕಾರವು ತೆಗೆದುಕೊಳ್ಳುತ್ತಿರುವ ಕ್ರಮಗಳೇನು?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):

ಅ) ಹೌದು.

ಆ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿಎಮ್‌ಆರ್‌ಡಿಎ) ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಪರಿಮಿತಿಯಲ್ಲಿ ಮುನಿಸಿಪಲ್ ಘನ ತ್ಯಾಜ್ಯ ವಸ್ತುಗಳ ಕ್ರೋಡಿಕರಣೆ, ವಿಭಜನೆ, ಸಂಗ್ರಹಣೆ ಹಾಗೂ ವಿಲೇವಾರಿ ಮಾಡುವ ಕಾರ್ಯವು ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರ ಪ್ರಾಧಿಕಾರದಲ್ಲಿರುತ್ತದೆ.

ಬೆಂಗಳೂರು ಮಹಾನಗರ ಪಾಲಿಕೆಯು ಮುನಿಸಿಪಲ್ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು (1) ಕನ್ನಹಳ್ಳಿಯ ಸರ್ವೆ ನಂ.85 ರಲ್ಲಿ 25 ಎಕರೆ, (2) ಕ್ಯಾಲಸನಹಳ್ಳಿಯಲ್ಲಿ 35.73 ಎಕರೆ (3) ಮಾವಳ್ಳಿಪುರದ ಸರ್ವೆ ನಂ.8 ರಲ್ಲಿ 100 ಎಕರೆ ಹಾಗೂ (4) ಮಂಡೂರು ಸರ್ವೆ ನಂ. 155 ರಲ್ಲಿ 169.10 ಎಕರೆ ಪ್ರದೇಶವನ್ನು ಗುರುತಿಸಿರುತ್ತದೆ. ಈ ಪ್ರದೇಶಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಧಿಕೃತಗೊಳಿಸಿರುತ್ತದೆ. ಆದಾಗ್ಯೂ ಈ ಸ್ಥಳಗಳು ಇನ್ನೂ ಕಾರ್ಯಾಚರಣೆಯಲ್ಲಿರುವುದಿಲ್ಲ. ವೈಜ್ಞಾನಿಕ ವಿಲೇವಾರಿ ಸೌಕರ್ಯಗಳ ಅಭಾವದಿಂದ ಕಟ್ಟಡಗಳ ಅವಶೇಷಗಳನ್ನೂಳಗೊಂಡಂತೆ ಎಲ್ಲಾ ಕಸವನ್ನು ಕಾನೂನು ಬಾಹಿರವಾಗಿ ಹಳೆ ಮದ್ರಾಸ್ ರಸ್ತೆ ಹಾಗೂ ಇತರೆ ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಮುನಿಸಿಪಲ್ ಘನ ತ್ಯಾಜ್ಯ ವಸ್ತುಗಳನ್ನು ಕಾನೂನು ಬಾಹಿರವಾಗಿ ವಿಲೇವಾರಿ ಮಾಡುವವರ ವಿರುದ್ಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ:

ಅ) ನಗರ ಸಭೆ/ಬೆಂಗಳೂರು ಮಹಾನಗರ ಪಾಲಿಕೆಗಳ ಪರಿಮಿತಿಯಲ್ಲಿ ಬರುವ ರಸ್ತೆಗಳ ಹಾಗೂ ತೆರೆದ ಪ್ರದೇಶಗಳಲ್ಲಿ ಕಾನೂನು ಬಾಹಿರವಾಗಿ ಮುನಿಸಿಪಲ್ ಘನ ತ್ಯಾಜ್ಯ ವಸ್ತುಗಳ ಪೇರಿಸುವಿಕೆಯನ್ನು ತಡೆಗಟ್ಟಲು ಹಾಗೂ ಆದಷ್ಟು ಬೇಗ ಅಧಿಕೃತ ಹೊಂದಿರುವ ವಿಲೇವಾರಿ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರವರಿಗೆ ತಿಳಿಸಲಾಗಿರುತ್ತದೆ.

ಆ) ಮಾವಳ್ಳಿಪುರದ ಸುಭೇದಾರ್‌ಪಾಳ್ಯದಲ್ಲಿ ಶ್ರೀ ಬಿ. ಹನುಮಂತರಾಯಪ್ಪರವರ ಸ್ವಂತ ಜಮೀನಿನಲ್ಲಿ ಕಾನೂನು ಬಾಹಿರನಾಗಿ ಮುನಿಸಿಪಲ್ ಘನ ತ್ಯಾಜ್ಯ ವಸ್ತುಗಳನ್ನು ಪೇರಿಸುತ್ತಿದ್ದರಿಂದ ದಿನಾಂಕ 9.11.05 ರಂದು ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಕಾರಣ ಕೇಳುವ ನೋಟಿಸ್‌ನ್ನು ನೀಡಲಾಗಿದೆ.

ಇ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರ ವರಿಗೆ ಹಾಗೂ ನಗರ ಸಭೆ – ಬ್ಯಾಟರಾಯನಪುರ ಆಯುಕ್ತರವರಿಗೆ ಕ್ರಮವಾಗಿ ದಿನಾಂಕ 15.12.2005, 23.1.2006 ಮತ್ತು 5.1.2006 ರಂದು ಕಾರಣ ಕೇಳುವ ನೋಟಿಸ್‌ನ್ನು ಜಾರಿಗೊಳಿಸಿದೆ.

ಈ) ಸುಬೇದಾರ್‌ಪಾಳ್ಯದ ಶ್ರೀ ಹೆಚ್. ಬೈಲಪ್ಪ ಹಾಗೂ ಶ್ರೀ ಎನ್.ಬಿ. ಹನುಮಂತ ರಾಯಪ್ಪರವರು ಬೆಂಗಳೂರು ಮಹಾನಗರ ಪಾಲಿಕೆಯ ಮುನಿಸಿಪಲ್ ಘನ ತ್ಯಾಜ್ಯ ವಸ್ತುಗಳನ್ನು ತಮ್ಮ ಸ್ವಂತ ಜಮೀನಿನಲ್ಲಿ ಕಾನೂನು ಬಾಹಿರವಾಗಿ ಪ್ರೇರಿಸಲು ಅವಕಾಶ ಮಾಡಿಕೊಟ್ಟದ್ದರ ವಿರುದ್ಧ ಸೆಕ್ಷೆನ್ 25 ಹಾಗೂ 33 ರ ಜಲ (ನಿರ್ವಹಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ, 1974 ರ ಅನ್ವಯ ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ 1986 ರ ಸೆಕ್ಷನ್ 15 ರ ಅನ್ವಯ ದಿನಾಂಕ 18.03.2006 ರಂದು ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿರುತ್ತದೆ.

ಉ) ಮಾಗಡಿ ಮುಖ್ಯ ರಸ್ತೆಯ ತಗ್ಗು ಪ್ರದೇಶದಲ್ಲಿ ಕಟ್ಟಡದ ಅವಶೇಷಗಳನ್ನು ಪ್ರೇರಿಸುತ್ತಿದ್ದರಿಂದ ಕಲುಷಿತ ನೀರು ನಿಂತು ನಾರುತ್ತಿರುವ ದೂರಿನ ಕುರಿತು ದಾಸರಹಳ್ಳಿ ನಗರಸಭೆ, ಆಯುಕ್ತರನ್ನು ಮೌಖಿಕ ವಿಚಾರಣೆಗೆ ಕರೆಯಲಾಗಿದೆ.

ಪ್ರಸ್ತುತದಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯವರು ಖಾಸಗಿ ಸಂಘಗಳ ಸಹಯೋಗದೊಂದಿಗೆ, ಮಾವಳ್ಳಿಪುರದಲ್ಲಿ ವೈಜ್ಞಾನಿಕ ವಿಲೇವಾರಿ ಪ್ರದೇಶವನ್ನು ಸ್ಥಾಪಿಸುವ ಕಾರ್ಯವನ್ನು ಮತ್ತು ಮಂಡೂರಿನಲ್ಲಿ ತ್ಯಾಜ್ಯದಿಂದ ವಿದ್ಯುತ್‌ಶಕ್ತಿ ಉತ್ಪಾದಿಸುವ ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ.

156(338) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಲೆಕ್ಕಿಗರನ್ನೇ ಕಂಪ್ಯೂಟರ್ ಸೆಂಟರ್‌ಗೆ ನಿಯೋಜಿಸಲಾಗುತ್ತಿರುವುದರಿಂದ ಹಾಗೂ ಅವರೇ 3-4 ಗ್ರಾಮವೃತ್ತಗಳನ್ನು ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರು ಅವರವರ ದೈನಂದಿನ ಕಾರ್ಯಗಳಿಗಾಗಿ ಅವರನ್ನು ಸಂಪರ್ಕಿಸಲು ಊರೂರು ಅಲೆದಾಡಬೇಕಾದ ಪರಿಸ್ಥಿತಿ ಉಂಟಾಗಿರುವುದರಿಂದ ಅದನ್ನು ನಿವಾರಿಸಲು ಸರ್ಕಾರ ಯಾವ (ಯಾವ) ಕ್ರಮ ಕೈಗೊಳ್ಳಲಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಕಂದಾಯ ಇಲಾಖೆಯಯಲ್ಲಿ 8244 ಗ್ರಾಮಲೆಕ್ಕಿಗರ ಮಂಜೂರಾದ ಹುದ್ದೆಗಳಿದ್ದು, 7699 ಹುದ್ದೆಗಳನ್ನು ತುಂಬಲಾಗಿದೆ. ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಈ ಗ್ರಾಮಲೆಕ್ಕಿಗರ ಪೈಕಿ ಸುಮಾರು 1000 ಗ್ರಾಮಲೆಕ್ಕಿಗರನ್ನು ಪೂರ್ಣಾವಧಿ ಆಧಾರದ ಮೇರೆಗೆ ಕಂಪ್ಯೂಟರ್ ಸೆಂಟರ್‌ಗೆ ನಿಯೋಜಿಸಲಾಗಿದೆ. ಉಳಿದ ಗ್ರಾಮಲೆಕ್ಕಿಗರಿಗೆ ಈ 1000 ಗ್ರಾಮಲೆಕ್ಕಿಗರ ಹೆಚ್ಚುವರಿ ಗ್ರಾಮ ವೃತ್ತಗಳನ್ನು ವಹಿಸಲಾಗಿದೆ. ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಗ್ರಾಮಲೆಕ್ಕಿಗರ ನೇರನೇಮಕಾತಿ ಪ್ರಕ್ರಿಯೆಯು ಹಲವು ವರ್ಷಗಳಿಂದ ಸ್ಥಗಿತಗೊಂಡಿದೆ. ಇದರಿಂದ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಬಿದ್ದಿವೆ. ಈ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಮಾತ್ರ ಭರ್ತಿ ಮಾಡಲಾಗುತ್ತಿದೆ. ನಿಯೋಜನೆ ಮಾಡಲಾದ ಗ್ರಾಮಲೆಕ್ಕಿಗರ ಗ್ರಾಮಕ್ಕೆ ತಾತ್ಕಾಲಿಕ ಬೇರೆ ಪ್ರಭಾರ ವ್ಯವಸ್ಥೆಯನ್ನು ಮಾಡಿ ಸಾರ್ವಜನಿಕರಿಗೆ ಅವರವರ ದೈನಂದಿನ ಕಾರ್ಯದಲ್ಲಿ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ. ಈ ಕಂಪ್ಯೂಟರ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮಲೆಕ್ಕಿಗರಿಗೆ ಯಾವುದೇ ಹೆಚ್ಚುವರಿ ಗ್ರಾಮಗಳ ಕೆಲಸವನ್ನು ವಹಿಸಬಾರದೆಂದು ಸರ್ಕಾರವು ಎಲ್ಲ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

157(180) ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ (ವೇಮಗಲ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿ ವೃಂದವಾರು (ಕೇಡರ್) ಮಂಜೂರಾದ ಹುದ್ದೆಗಳೆಷ್ಟು ಹಾಗೂ ಅದರಲ್ಲೂ ವಿಶೇಷವಾಗಿ ವಾಚರ್ಸ್ ಮತ್ತು ಗಾರ್ಡ್ಸ್ ವೃದವೂ ಸೇರಿದಂತೆ ಇವುಗಳಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು (ವೃಂದವಾರು ಪ್ರತ್ಯೇಕ ವಿವರಗಳನ್ನು ನೀಡುವುದು)

ಆ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;

ಇ) ಅರಣ್ಯ ಕಾವಲುಗಾರರ ಕೊರತೆಯಿಂದಾಗಿ ಅರಣ್ಯ ಸಂಪತ್ತು ನಷ್ಟವಾಗುತ್ತಿಲ್ಲವೇ;

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು (ಮಾಹಿತಿ ನೀಡುವುದು)?